**ಎಸ್ ನಂಃ 49/2019**

**ಪಿ. ಡಬ್ಲ್ಯೂ ಃ 1**

**ದಿಃ 3.06.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಟಿ ಕೆ ಹೆಚ್ ವಕೀಲರಿಂದ ಃ**

ಮೋಟಗಾನಹಳ್ಳಿಯಿಂದ ತೆಮ್ಮನಹಳ್ಳಿಗೆ 3 ಕಿ ಮೀ ದೂರ ಇರುತ್ತದೆ. ಪ್ರತಿವಾದಿಗಳು ನಮ್ಮ ಸಂಬಂದಿಕರು ಅಲ್ಲ. ಅವರು ನನಗೆ ಮೊದಲಿನಿಂದಲೂ ಗೊತ್ತು. ದಾವಾ ಸ್ವತ್ತಿನ ಸರ್ವೆ ನಂ 113 ಇರುತ್ತದೆ. ಆ ಸ್ವತ್ತು ಮೊದಲು ಹುಚ್ಚಹನುಮಯ್ಯ ಇವರ ಹೆಸರಿನಲ್ಲಿತ್ತು ಅವರು ಪ್ರತಿವಾದಿಗಳ ತಂದೆ ಇರುತ್ತಾರೆ. ಆ ಸ್ವತ್ತು ಹುಚ್ಚುಹನುಮಯ್ಯರವರಿಗೆ ಸರ್ಕಾರರಿಂದ ಮಂಜೂರಾಗಿತ್ತು. ಅದು ಅವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿ. ಕ್ರಯದ ಕರಾರು ಪತ್ರದಲ್ಲಿ ಹುಚ್ಚಹನುಮಯ್ಯರವರಿಗೆ ದಾವಾ ಸ್ವತ್ತು ಗ್ರಾಂಟ್ ಮೂಲಕ ಬಂದಿತ್ತು ಎಂದು ಬರೆದಿಲ್ಲ. ನಿಪಿ 3 ನ್ನು ದಿನಾಂಕಃ 18-09-2017 ರಂದು ತೆಗೆದುಕೊಂಡಿರುತ್ತೇನೆ ಎಂದರೆ ಗೊತ್ತು. ಅದನ್ನು ಕೇಸ್ ಹಾಕುವ ಮೊದಲು ಪಡೆದುಕೊಂಡಿರುತ್ತೇನೆ ಎಂದರೆ ಸರಿ. ನಿಪಿ 3 ರಲ್ಲಿ ರಾಜು ಬಿನ್ ಲೇಟ್ ಹುಚ್ಚಹನುಮಯ್ಯ ಹೆಸರು ವಿಲ್ ಮೂಲಕ ದಾಖಲು ಎಂದು ಬರೆದಿದೆ ಎಂದರೆ ಸರಿ ಅದನ್ನು ನಾವೇ ಮಾಡಿಸಿರುತ್ತೇವೆ ಎಂದು ಹೇಳುತ್ತಾರೆ. 4 ನೇ ಪ್ರತಿವಾದಿಗೆ ದಾವಾ ಸ್ವತ್ತು ಅವರ ತಂದೆಯವರ ಸ್ವಯಾರ್ಜಿತ ಸ್ವತ್ತಾಗಿದ್ದು ವಿಲ್ ಮೂಲಕ ಬಂದಿತ್ತು ಎಂದರೆ ಸರಿ.

ಕರಾರು ಪತ್ರದಲ್ಲಿ ಹುಚ್ಚಹನುಮಯ್ಯನ ನಾಲ್ಕು ಜನ ಮಕ್ಕಳು ಸೇರಿ ಬರೆದುಕೊಟ್ಟಿದ್ದಾರೆ ಎಂದು ನಮೂದಿದೆ ಎಂದರೆ ಸರಿ. ಸ್ಟಾಂಪ್ ಪೇಪರ್ ಖರೀದಿಸುವಾಗ ನನ್ನ ಹೆಸರು ಮತ್ತು 1 ನೇ ಪ್ರತಿವಾದಿ ಹೆಸರು ಇದೆ ಎಂದರೆ ಸರಿ, ನಾಲ್ಕು ಜನ ಪ್ರತಿವಾದಿಗಳ ಹೆಸರು ಇಲ್ಲ ಎಂದರೆ ಸರಿ. ಕ್ರಯದ ಕರಾರು ಪತ್ರದ 3 ನೇ ಪುಟದಲ್ಲಿ ವಿಲ್ ನ ಪತ್ರದ ಸಂ ಮತ್ತು ದಿನಾಂಕವನ್ನು ನಂತರದಲ್ಲಿ ಬರೆದಿದ್ದೇವೆ ಎಂದರೆ ಸರಿ, ಏಕೆಂದರೆ ಕರಾರು ಪತ್ರ ಹಾಕುವಾಗ ಪ್ರತಿವಾದಿಗಳಿಗೆ ಗೊತ್ತಿರಲಿಲ್ಲ ಮತ್ತು ಕಾಣಲಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. 3 ನೇ ಪುಟದಲ್ಲಿ ಪ್ರತಿವಾದಿ 1 ಒಬ್ಬರೇ ಬರೆದುಕೊಟ್ಟ ರೀತಿಯಲ್ಲಿ ನನಗೆ ವಿಲ್ ಮೂಲಕ ಬಂದ..... ಎಂದು ಬರೆದಿದೆ ಎಂದರೆ ಸರಿ. ದಿನಾಂಕಃ 08-12-2016 ರಂದು ಪ್ರತಿವಾದಿ 1 ರಿಂದ 3 ರವರಿಗೆ ಚೆಕ್ ಮತ್ತು ನಗದಾಗಿ ಹಣ ಕೊಟ್ಟಿದ್ದೇವೆ, ಖಾತೆ ಇದ್ದವರಿಗೆ ಚೆಕ್ ಕೊಟ್ಟಿದ್ದೇವೆ ಮತ್ತು ಖಾತೆ ಇಲ್ಲದವರಿಗೆ ನಗದು ಕೊಟ್ಟಿದ್ದೇವೆ ಎಂದು ಸಾಕ್ಷಿ ಹೇಳುತ್ತಾರೆ. ಕ್ರಯದ ಕರಾರು ಪತ್ರದಲ್ಲಿ ಈ ವಿಷಯ ಬರೆಸಿಲ್ಲ ಎಂದರೆ ಸರಿ. ಪ್ರತಿವಾದಿ 1 ರಿಂದ 3 ರವರ ಆಸ್ತಿ ಅಲ್ಲ ಎಂದರೆ ಸರಿ ಲಾಯರ್ ಹೇಳಿದ್ದರಿಂದ ಕರಾರು ಪತ್ರದಲ್ಲಿ

ಅವರು ಸಹಿ ಮಾಡಿಸಿದ್ದೇವೆ ಎಂದು ಹೇಳುತ್ತಾರೆ. ನನಗೆ 4ನೇ ಪ್ರತಿವಾದಿಯು ಕರಾರು ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ ಆತನು ನನ್ನ ಜೊತೆ ಯಾವುದೇ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ, 4ನೇ ಪ್ರತಿವಾದಿಗೆ ಚೆಕ್ ಮೂಲಕ ಅಥವಾ ನಗದಾಗಿ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ರಿಂದ 3ರವರಿಗೆ ಕ್ರಯದ ಕರಾರು ಪತ್ರ ಬರೆದುಕೊಡಲು ಯಾವುದೇ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. 4ನೇ ಪ್ರತಿವಾದಿಯ ಸಹಿಯನ್ನು ಫೋರ್ಜರಿ ಮಾಡಿ ಕ್ರಯದ ಕರಾರು ಪತ್ರವನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಮೋಟಗಾನಹಳ್ಳಿಯಲ್ಲಿ ಪಟೇಲ್ ನರಸಿಂಹಯ್ಯ ಎಂಬ ಪತ್ರಗಾರರು ಇದ್ದರು ಎಂದರೆ ಸರಿಯಲ್ಲ, ಅವರು ನಾನು ಹುಟ್ಟುವ ಮೊದಲೇ ತೀರಿಕೊಂಡಿದ್ದರು. ಕರಾರು ಪತ್ರದ ಛಾಪಾ ಕಾಗದವನ್ನು ನೆಲಮಂಗಲದಲ್ಲಿ ತೆಗೆದುಕೊಂಡಿರುತ್ತೇವೆ. ಅಲ್ಲಿಂದ ಪೇಪರ್ ತಂದು ಮಾಗಡಿಯ ಲಾಯರ್ ಆಫೀಸಿನಲ್ಲಿ ಪತ್ರ ಬರೆಸಿರುತ್ತೇವೆ. ಯಾವ ಲಾಯರ್ ಆ ಪತ್ರವನ್ನು ಬರೆದಿದ್ದಾರೆ ಎಂದು ಗೊತ್ತಿಲ್ಲ ಏಕೆಂದರೆ ಪ್ರತಿವಾದಿಗಳು ಅವರನ್ನು ಕರೆದುಕೊಂಡು ಬರೆಸಿರುತ್ತಾರೆ. ಅವರ ಹೆಸರು ಈಗ ಮರೆತಿರುತ್ತೇನೆ. ನೆಲಮಂಗಲದಲ್ಲಿಯೂ ಲಾಯರ್, ಟೈಪಿಸ್ಟ್ ಇರುತ್ತಾರೆ ಎಂದರೆ ಸರಿ. ಮೋಟಗಾನಹಳ್ಳಿಯಿಂದ ನೆಲಮಂಗಲ ಹತ್ತಿರವಾಗುತ್ತದೆ ಎಂದರೆ ಸರಿಯಲ್ಲ. ಕರಾರು ಪತ್ರ ಆಗುವಾಗ ಪ್ರೇಮಕುಮಾರ್, ಹೊಸಳಪ್ಪ ಮತ್ತು ರುದ್ರೇಶ್ ಎಂಬುವವರು ಸಾಕ್ಷಿದಾರರು ಇದ್ದರು.

ದಿನಾಂಕಃ 05-03-2017ರಂದು 4ನೇ ಪ್ರತಿವಾದಿ ನನ್ನ ಬಳಿ ಬಂದು 50 ಸಾವಿರ ರೂ ಪಡೆದುಕೊಂಡು ಷರಾ ಬರೆದುಕೊಟ್ಟಿದ್ದಾರೆ. ಷರಾದಲ್ಲಿ 4 ಜನ ಹಣ ಪಡೆದುಕೊಂಡಿರುತ್ತಾರೆಂದು ಬರೆದಿರುತ್ತಾರೆ ಎಂದರೆ ಸರಿಯಲ್ಲ ಷರಾವನ್ನು 4ನೇ ಪ್ರತಿವಾದಿ ಬರೆದಿದ್ದಾರೆ. ಇದಕ್ಕೆ ಬಿಕ್ಲಂ ಬರಹಗಾರರು ಇರುವುದಿಲ್ಲ. ಷರಾದಲ್ಲಿರುವ ಬರವಣಿಗೆ ಮತ್ತು ಸಹಿ 4ನೇ ಪ್ರತಿವಾದಿಯದ್ದು ಅಲ್ಲ ಎಂದರೆ ಸರಿಯಲ್ಲ. ಷರಾವನ್ನು ಲಾಯರ್ ಬರೆದಿದ್ದಾರೆ ಎಂದು ಸಾಕ್ಷಿ ಪುನಃ ಹೇಳುತ್ತಾರೆ. ಷರಾವನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಕರಾರು ಪತ್ರ ಮತ್ತು ಷರಾದಲ್ಲಿರುವ 4ನೇ ಪ್ರತಿವಾದಿಯ ಸಹಿಯನ್ನು ತಜ್ಞರ ಬಳಿ ಕಳುಹಿಸಿ ಪರೀಕ್ಷೆ ಮಾಡಿಸಲು ನನ್ನ ಅಭ್ಯಂತರ ಇರುವುದಿಲ್ಲ. 4ನೇ ಪ್ರತಿವಾದಿಯ ವಿರುದ್ದ ನಾನು ಯಾವುದೇ ಪರಿಹಾರ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. 4ನೇ ಪ್ರತಿವಾದಿ ದಾವಾ ಸ್ವತ್ತಿನ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ.

**ಮರುವಿಚಾರಣೆ ಃ ಇಲ್ಲ**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,

ಮಾಗಡಿ.